ವಿಷಯ : ಮುಂಡರಗಿ ಪುರಸಭೆಯ ನೌಕರರಿಗೆ ವೇತನ ನೀಡದಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 343(478)

ಶ್ರೀ ಕೆ.ಹೆಚ್. ಕುರಡಗಿ(ಮುಂಡರಗಿ) : ಮಾನ್ಯ ನಗರಾಭಿವೃದ್ಧಿ ಮತ್ತು ವರ್ಕ್ಸ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ಪುರಸಭೆಯ ನೌಕರದಾರರಿಗೆ 6 ತಿಂಗಳ ಸಂಬಳವನ್ನು ಕೊಟ್ಟಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ. ಆರ್. ಸಗೀರ್ ಅಹಮ್ಮದ್(ನಗರಾಭಿವೃದ್ಧಿ ಮತ್ತು ವರ್ಕ್ಸ್ ಸಚಿವರು)

ಅ) ಹೌದು.

ಆ) ಬಹಳಷ್ಟು ಪುರಸಭೆ ನಗರಸಭೆಗಳಲ್ಲಿ ಆಕ್ಟ್ರಾಯ್ ಅನುದಾನದಿಂದ ಅವರ ಸಂಬಳ ಕೊಡಲಾಗುತ್ತಿದೆ. ದಿನಾಂಕ : 30.7.94 ರಂದು ಮುಂಡರಗಿ ಪುರಸಭೆಗೆ ಆಕ್ಟ್ರಾಯ್ ಅನುದಾನ ಬಿಡುಗಡೆ ಮಾಡಲಾಗಿದೆ.

ವಿಷಯ : ಪರಿಶಿಷ್ಟ ಜಾತಿಃಪರಿಶಿಷ್ಟ ವರ್ಗದವರಿಗೆ ಕೇಂದ್ರದಿಂದ ಬರುವ ವಿಶೇಷ ಘಟಕ ಯೋಜನೆಯ ಹಣದ ಬಾಬ್ತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 344(411)

ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಎಷ್ಟು ಹಣ ವಿಶೇಷ ಘಟಕ ಯೋಜನೆ ಅಡಿಯಲ್ಲಿ 1994-95ನೇ ಸಾಲಿಗೆ ನಿಗದಿಪಡಿಸಲಾಗಿರುತ್ತದೆ?

ಆ) ಇದನ್ನು ಎಷ್ಟು ಇಲಾಖೆಯ ಮುಖಾಂತರ ವಿತರಣೆ ಮಾಡಿ ಈ ವರ್ಗದವರಿಗೆ ವಿತರಣೆ ಮಾಡಲಾಗಿದೆ?

ಇ) ಇದರ ಸದುಪಯೋಗದ ಬಗ್ಗೆ 'ಮೇಲ್ವಿಚಾರಣೆ' ಮಾಡಲು ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಮಟ್ಟದಲ್ಲಿ ಯಾವ ರೀತಿ ವ್ಯವಸ್ಥೆ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1994-95ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಅನುಷ್ಠಾನಕ್ಕಾಗಿ ಈ ಕೆಳಕಂಡಂತೆ ಹಣವನ್ನು ಆಯವ್ಯಯದಲ್ಲಿ ನಿಗದಿಗೊಳಿಸಲಾಗಿದೆ :-